CC 176/24
CW 2 – PW 2

**3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಚನ್ನರಾಯಪಟ್ಟಣ**

| | |
|---|---|
| ಸಾಕ್ಷಿದಾರರ ಹೆಸರು | **ಯುಕ್ತಶ್ರೀ** |
| ತಂದೆಯ ಹೆಸರು | **ದತ್ತಾತ್ರೇಯ** |
| ವಯಸ್ಸು | **20 ವರ್ಷ** |
| ವೃತ್ತಿ | **ವಿದ್ಯಾರ್ಥಿ** |
| ವಾಸಸ್ಥಳ | **ಹಾಸನ** |
| ಪ್ರಮಾಣ ವಚನ ಬೋಧಿಸಿದ ದಿನಾಂಕಃ | **27.02.2026** |

**<u>ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

1) ಚಾಸಾ–1 ನನ್ನ ತಾಯಿ. ಚಾಸಾ–3 ನನ್ನ ತಮ್ಮ. ಚಾಸಾ–4 ಗೊತ್ತು. ಚಾಸಾ–5 ನನ್ನ ತಾತ. ಚಾಸಾ–6 ರಿಂದ 8 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. 31.12.2023ರಂದು ಹೊಸ ವರ್ಷ ಆಚರಣೆಗೆಂದು ನಾನು ಚಾಸಾ– 1 ಮತ್ತು 3ರವರೊಂದಿಗೆ ರಾತ್ರಿ ಸಮಯದಲ್ಲಿ ತೋಟದ ಮನೆಗೆ ಹೋಗಿದ್ದೆ. ಅಲ್ಲಿ 1 ಮತ್ತು 2ನೇ ಆರೋಪಿ ಹಾಗೂ ಒಬ್ಬ ಮಹಿಳೆ ಹಾಗೂ ಅವರ ಕುಟುಂಬಸ್ಥರು ಇದ್ದರು. ಆಗ 1ನೇ ಆರೋಪಿ ಮತ್ತು ಚಾಸಾ–1ರವರ ನಡುವೆ ಮಾತಿನ ಚಕಾಮಕಿ ಉಂಟಾಗಿ 1ನೇ ಆರೋಪಿ ಚಾಸಾ–1ರವರನ್ನು ಇಲ್ಲಿಗೆ ಹೇಳದೆ ಬಂದಿದ್ದೀರಾ ಎಂದು ಪ್ರಶ್ನಿಸಿದಾಗ ಅವರ ನಡುವೆ ಮಾತಿನ ಗಲಾಟೆ ಆಗಿರುತ್ತದೆ. ಆನಂತರ 1ನೇ ಆರೋಪಿ ಮತ್ತು ಅಲ್ಲಿದ್ದ ಮಹಿಳೆ ಮತ್ತು ಕುಟುಂಬಸ್ಥರು ಅಲ್ಲಿಂದ ಹೊರಟು ಹೋದರು. ಆ ದಿನ ಅಲ್ಲೇ ಉಳಿದುಕೊಂಡು ಮರುದಿನ ನಾನು ಕಾಲೇಜಿಗೆ ಹೋಗಿರುತ್ತೇನೆ.

2) ಆನಂತರ ಚಾಸಾ–1ರವರು ಹಿರಿಸಾವೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ವಿಚಾರ ತಿಳಿಯಿತು. ನಾನು ಪೊಲೀಸ್ ಠಾಣೆಗೆ ಹೋಗಿಲ್ಲ ಮತ್ತು ಯಾವುದೇ ದೂರು ನೀಡಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ವಾದ ಆಲಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ</u>**

3) ದಿಃ 02.01.2024ರಂದು ಸಾಕ್ಷಿಯು ಪೊಲೀಸರಿಗೆ ನೀಡಿರುವ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿಯು ಸಂಪೂರ್ಣವಾಗಿ ಅಲ್ಲಗಳೆದಿದ್ದು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿ.ಪಿ.

4 ಎಂದು ಗುರುತಿಸಲಾಯಿತು. ಆ ದಿನ ಗಲಾಟೆಯಾಗಿದ್ದು ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದರೂ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಸಿ ಹೆಚ್ ಆರ್ ವಕೀಲರಿಂದಃ**

4) ಆರೋಪಿತರು ಆ ದಿನ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಾತಿನ ಜಗಳ ಅಷ್ಟೇ ಆಯಿತು ಎಂದು ನುಡಿಯುತ್ತಾರೆ. ನಮ್ಮ ತಂದೆ ತಾಯಿ ಅವರ ವೈಯಕ್ತಿಕ ಭಿನ್ನಾಭಿಪ್ರಾಯದಿಂದಾಗಿ ಬೇರೆ ಬೇರೆ ಇದ್ದಾರೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ಮಾತಿನ ಚಕಾಮಕಿ ನಡೆಯದೇ ಇದ್ದರೂ ಚಾಸಾ–1ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ